# ಶ್ರೀಮಾತೆ ಶಾರದಾದೇವಿ : ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ದೃಷ್ಟಿಯಲ್ಲಿ

ವಿ. ಮೀನಾ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

**ಸ್ವಾಮಿ ಪ್ರೇಮಾನಂದರು :** ಶ್ರೀಮಾತೆ ಶಾರದಾದೇವಿ ಸಾಕ್ಷಾತ್ ದುರ್ಗೆ, ಜಗಜ್ಜನನಿ, ಮಹಾಮಾಯೆ ಎಂಬುದು ಸ್ವಾಮಿ ಪ್ರೇಮಾನಂದರ ಖಚಿತವಾದ ನಂಬಿಕೆಯಾಗಿತ್ತು. ಬೇಲೂರು ಮಠದ ದುರ್ಗಾಪೂಜೆಯಲ್ಲಿ ಶ್ರೀಮಾತೆ ಪಾಲ್ಗೊಂಡರೆ, ಶ್ರೀದುರ್ಗಾದೇವಿಯೇ ಬಂದಂತೆ ಭಾವಿಸುತ್ತಿದ್ದರು ಹಾಗೂ ಶ್ರೀಮಾತೆಯವರು ಆಶೀರ್ವದಿಸಿದರೆ, ಶ್ರೀದುರ್ಗೆಯು ಆಶೀರ್ವಾದವೇ ದೊರೆಯಿತೆಂದು ಸ್ವಾಮಿಗಳು ನಂಬಿದ್ದರು. ಪ್ರೇಮಾನಂದರು ತಮ್ಮನ್ನು ಓರ್ವ ಚಿಕ್ಕ ಮಗುವೆಂದು ಭಾವಿಸಿಕೊಂಡು ಶ್ರೀಮಾತೆಯು ಹೇಳಿದಂತೆ ಮಾಡುತ್ತಿದ್ದರು. ಒಮ್ಮೆ ಕೆಲವು ಭಕ್ತರು ಸ್ವಾಮಿಗಳನ್ನು ಪೂರ್ವಬಂಗಾಳಕ್ಕೆ ಕರೆದುಕೊಂಡು ಹೋಗಬೇಕೆಂದು ಬಂದರು. ಅವರು ತಮ್ಮ ಬಯಕೆಯನ್ನು ಪ್ರೇಮಾನಂದರಿಗೆ ತಿಳಿಸಿದರು. ಆಗ ಸ್ವಾಮಿಗಳು ಎಲ್ಲವನ್ನೂ ಶ್ರೀಮಾತೆಯವರ ಮುಂದಿಟ್ಟು, "ಅಮ್ಮಾ, ನಾನು ಮೂರ್ಖ. ಎಲ್ಲರೂ ಬಂದು ನನ್ನನ್ನು ಕರೆದುಕೊಂಡು ಹೋಗಬಯಸುತ್ತಾರೆ, ನಾನೇನು ಮಾಡಲಿ ತಾಯಿ?" ಎಂದರು. ಆಗ ಶ್ರೀಮಾತೆಯವರು "ಭಯವೇನು ಬಾಬುರಾಮ್? ಶ್ರೀರಾಮಕೃಷ್ಣರು ನಿನ್ನ ಕಂಠದಲ್ಲಿ ಕುಳಿತು ಮಾತನಾಡುತ್ತಾರೆ" ಎಂದರು. ಅವರ ಆಶೀರ್ವಾದ ಪಡೆದ ಮೇಲೆ ಪ್ರೇಮಾನಂದರು ಪ್ರಯಾಣಕ್ಕೆ ಸಿದ್ಧರಾದರು. ಹೊರಡುವುದಕ್ಕೆ ಮುಂಚೆ ಅವರು ಶ್ರೀಮಾತೆಯವರಿಗೆ ಹೇಳಿದರು, "ಅಮ್ಮಾ, ನನಗೇನು ತಿಳಿದಿದೆ? ನೀವು ಆದೇಶಿಸಿದಂತೆ ಮಾಡುತ್ತೇನೆ. ನೀರಿನಲ್ಲಿ ಬೀಳು ಎಂದರೆ ನೀರಿನಲ್ಲಿ ಬೀಳುವೆ. ಬೆಂಕಿಯಲ್ಲಿ ಬೀಳು ಎಂದರೆ ಬೆಂಕಿಯಲ್ಲಿ ಬೀಳುವೆ."

೧೯೧೭ರಲ್ಲಿ ಒಬ್ಬ ಸಾಧಕರಿಗೆ ಬರೆದ ಪತ್ರದಲ್ಲಿ ಪ್ರೇಮಾನಂದಜಿ ಈ ರೀತಿ ಹೇಳುತ್ತಾರೆ: "ಶ್ರೀಮಾತೆಯವರ ಆದೇಶ ಪಾಲನೆಯೇ ನಮ್ಮೆಲ್ಲರ ಧರ್ಮ ಹಾಗೂ ಕರ್ಮ. ನಾವೆಲ್ಲಾ ಯಂತ್ರಗಳು. ಆಕೆ ಯಂತ್ರಿ. ಯಾರಿಗೆ ಏನು ಹೇಳುತ್ತಾರೋ ಅವರು ಅದನ್ನೇ ಮಾಡಬೇಕು." ಅದೇ ವರ್ಷ ಮತ್ತೊಬ್ಬರು ಸ್ತ್ರೀಭಕ್ತರಿಗೆ ಬರೆಯುತ್ತ, "ಶ್ರೀಮಾತೆಯವರ ದರ್ಶನ, ಅವರಿಂದ ದೀಕ್ಷೆ—ಇವೆಲ್ಲ ನಿನ್ನ ಕೋಟಿ ಜನ್ಮಗಳ ಪುಣ್ಯಫಲ. ಶ್ರೀಮಾತೆ ಸ್ಪರ್ಶಮಣಿ. ಅವರನ್ನು ಸ್ಪರ್ಶಿಸಿದ ಎಲ್ಲಾ ಲೋಹಗಳೂ ಚಿನ್ನವಾಗಿ ಹೋಗುತ್ತವೆ. ನಿನ್ನಲ್ಲಿ ಭೋಗದ ಆಸಕ್ತಿ ಕಡಿಮೆಯಾಗುತ್ತ, ಮನಸ್ಸು ಭಕ್ತಿಯ ಕಡೆಗೆ ಹರಿಯುತ್ತಿದೆ. ನಿನ್ನ ಜನ್ಮ ಸಫಲವಾಯಿತು. ನಿನಗೆ ವಿಶ್ವಾಸವಿರಲಿ ಅಥವಾ ಬಿಡಲಿ, ಶ್ರೀಮಾತೆಯವರು ಮಾನವ ಶರೀರದಲ್ಲಿದ್ದರೂ ಅವರದು ಅಪ್ರಾಕೃತ ಭಗವತಿಯ ತನುವೇ ಆಗಿದೆ. ಜೀವರ ಕಲ್ಯಾಣಕ್ಕಾಗಿ ಅವರು ಲೀಲೆ ಮಾಡುತ್ತಿದ್ದಾರೆ. ಶ್ರೀಮಾತೆಯ ಭಕ್ತರಿಗೆ ಯಾವ ವಿಧದ ಭಯವೂ ಇಲ್ಲ. ನಾವು ಎಂದು ಶ್ರೀಮಾತೆಯವರ ದರ್ಶನ ಪಡೆದೆವೋ ಅಂದೇ ನಿಶ್ಚಿತವಾಗಿ ಮುಕ್ತಿಯ ಸೋಪಾನ ಹತ್ತಲಾರಂಭಿಸಿದೆವು ಎಂದು ನಂಬು."

ಮತ್ತೊಂದು ಕಡೆ ಹೇಳಿದ್ದಾರೆ, "ನಮ್ಮ ತಾಯಿ ಸ್ವತಃ ರಾಜರಾಜೇಶ್ವರಿಯಾದರೂ ಸಾಧಾರಣ ಜನರಂತೆ ಮನೆಯ ಕೆಲಸವೆಲ್ಲವನ್ನೂ ಮಾಡುತ್ತಿದ್ದಾರೆ. ಗೃಹಸ್ಥರಿಗೆ ಆದರ್ಶವನ್ನು ಕಲಿಸುವುದಕ್ಕಾಗಿ ಭಕ್ತರ ಎಂಜಲನ್ನೂ ಶುಚಿಗೊಳಿಸುತ್ತಿದ್ದಾರೆ."

ಇನ್ನೊಮ್ಮೆ ಶ್ರೀಮಾತೆಯವರ ಸಂಬಂಧವಾಗಿ ಹೀಗೆ ಹೇಳಿದ್ದಾರೆ: "ಶ್ರೀಮಾತೆಯವರನ್ನು ಯಾರು ಅರಿತಿದ್ದಾರೆ? ನೀವು ಸೀತಾ, ಸಾವಿತ್ರಿ , ವಿಷ್ಣುಪ್ರಿಯಾ, ರಾಧಾರಾಣಿ ಮುಂತಾದವರ ಕತೆ ಕೇಳಿದ್ದೀರಿ. ನಮ್ಮ ತಾಯಿ ಅವರೆಲ್ಲರಿಗಿಂತಲೂ ಉನ್ನತ ಸ್ಥಾನದಲ್ಲಿ ಕುಳಿತಿದ್ದಾರೆ. ಐಶ್ವರ್ಯದ ಲೇಶವಾದರೂ ಅವರಲ್ಲಿ ಇಲ್ಲ. ಶ್ರೀರಾಮಕೃಷ್ಣರಾದರೋ ಮತ್ತೆ ಮತ್ತೆ ಭಾವಸಮಾಧಿಗೆ ಹೋಗುತ್ತಿದ್ದರು. ನಾವು ಅದನ್ನು ಕಂಡಿದ್ದೇವೆ. ಆದರೆ ಶ್ರೀಮಾತೆ, ಅವರು ವಿದ್ಯೆಯ ಮಹತಿಯನ್ನೂ ಸಹ ತೋರಿಸಲಿಲ್ಲ. ಇದೆಂತಹ ಮಹಾಶಕ್ತಿ! ಜಯ್ ಮಾ! ಜಯ್ ಮಾ!" ಜಯರಾಮಬಾಟಿಯು ಪುಣ್ಯಕ್ಷೇತ್ರವೆಂದು ಅವರು ಭಾವಿಸುತ್ತಿದ್ದರು. ಅಲ್ಲಿಗೆ ಯಾರಾದರೂ ಹೋಗಿಬಂದರೆ ಅವರನ್ನು ಕುರಿತು, "ನೀವು ಜಯರಾಮಬಾಟಿಗೆ ಹೋಗಿ ಬಂದಿರಾ? ಅಹಾ! ಚೆನ್ನವಾಗಿ ಹೋದಿರಿ! ನಿಮ್ಮಿಂದ ನಾನು ಪ್ರಣಾಮ ಸ್ವೀಕರಿಸಲಾರೆ" ಎನ್ನುತ್ತಿದ್ದರು.

**ಸ್ವಾಮಿ ಅಭೇದಾನಂದರು :** ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆಯವರು ಬೃಂದಾವನ ಯಾತ್ರೆಗೆ ತೆರಳಿದಾಗ ಸ್ವಾಮಿ ಅಭೇದಾನಂದರೂ ಅವರ ಜೊತೆಯಲ್ಲಿದ್ದರು. ಅಂದಿನ ದಿನಗಳಲ್ಲಿ ಅವರು ಕಂಡಿದ್ದ ಶ್ರೀಮಾತೆಯವರ ಆಧ್ಯಾತ್ಮಿಕ ಜೀವನದ ಆಳವನ್ನು ಕುರಿತು ಬಹು ಶ್ರದ್ಧೆಯಿಂದ ಅಭೇದಾನಂದಜಿ ಬರೆಯುತ್ತಾರೆ: "ಒಮ್ಮೆ ಬೃಂದಾವನದಲ್ಲಿ ಕಾಲಾಬಾಬುವಿನ ಕುಂಜದಲ್ಲಿ ನೆಲಸಿದ್ದ ಸಮಯದಲ್ಲಿ ಶ್ರೀಮಾತೆಯವರು ರಾಧಾರಾಣಿಯ ಭಾವದಲ್ಲಿ

ತನ್ಮಯರಾಗಿ ಹೋದರು. ರಾಧೆ ಕೃಷ್ಣನಿಗಾಗಿ ವ್ಯಾಕುಲತೆಯಿಂದ ದುಃಖಿಸುತ್ತಿದ್ದಂತೆ ಹಾಗೂ ಆತನ ವಿರಹದ ವೇದನೆಯನ್ನು ಸಹಿಸದಂತೆ ಶ್ರೀಮಾತೆಯವರೂ ಸಹ ಶ್ರೀರಾಮಕೃಷ್ಣರ ವಿರಹದಿಂದ ಪರಿತಪಿಸಿದರು. ಬೃಂದಾವನದ ನಿಧುವನ, ರಾಧಾರಮಣ ಮಂದಿರ, ಯಮುನಾ ಪುಲಿನ ಮುಂತಾದ ಜಾಗಗಳನ್ನು ದರ್ಶಿಸುತ್ತ ಪ್ರೇಮಾಶ್ರುಧಾರೆಯನ್ನು ಹರಿಸಿದರು; ಹಾಗೂ ಮತ್ತೆ ಮತ್ತೆ ಭಾವಸಮಾಧಿಯಲ್ಲಿ ಮಗ್ನರಾಗುತ್ತಿದ್ದರು." ಅಭೇದಾನಂದಜಿ ಹೇಳುತ್ತಿದ್ದರು: "ಯಾರು ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆಯವರ ಮೇಲೆ ಪೂರ್ಣ ಭರವಸೆಯಿಡುತ್ತಾರೋ ಅವರನ್ನು ಸರ್ವಭಯಗಳಿಂದಲೂ ಅವರು ರಕ್ಷಣೆ ಮಾಡುತ್ತಾರೆ."

ಬಾರಾನಗರ ಮಠದಲ್ಲಿದ್ದಾಗಲೇ ಸ್ವಾಮಿ ಅಭೇದಾನಂದಜಿ ಶ್ರೀಮಾತೆಯವರ ಮೇಲಿನ ಪ್ರಸಿದ್ಧವಾದ **ಪ್ರಕೃತಿಂ ಪರಮಾಂ** ಸ್ತೋತ್ರವನ್ನು ರಚಿಸಿದ್ದು, ಈ ಸ್ತೋತ್ರದ ಮೂಲಕ ಅವರು ಶ್ರೀಮಾತೆಯವರ ನಿಜಸ್ವರೂಪವನ್ನು ಜಗತ್ತಿನ ಮುಂದಿಟ್ಟಿದ್ದಾರೆ. ಈ ಶ್ಲೋಕವನ್ನು ಆಲಿಸಿದ ಶ್ರೀಮಾತೆಯವರು ಅಭೇದಾನಂದರಿಗೆ ಆಶೀರ್ವಾದ ಮಾಡಿ "ಸದಾ ನಿನ್ನ ನಾಲಿಗೆಯಲ್ಲಿ ಸರಸ್ವತಿ ನೆಲಸಿರಲಿ" ಎಂದರು.

ಒಮ್ಮೆ ಭಕ್ತನಿಗೆ ಉಪದೇಶ ಮಾಡುತ್ತ ಸ್ವಾಮಿಗಳು ಹೇಳಿದರು, "ಯಾವ ಭಾವದಲ್ಲೇ ಆಗಲಿ ಸಾಧನೆ ಮಾಡು ಅಥವಾ ಬಿಡು. ಶ್ರೀಮಾತೆಯವರು ಕೃಪೆಮಾಡಿ ಬಾಗಿಲು ತೆಗೆಯದಿದ್ದರೆ ಏನೂ ಆಗುವುದಿಲ್ಲ. ಅವಶ್ಯವಾಗಿ ಶ್ರೀರಾಮಕೃಷ್ಣರನ್ನು ಹಿಡಿದಂತೆ ಶ್ರೀಮಾತೆಯವರನ್ನೂ ಹಿಡಿಯಲೇಬೇಕು. ಏಕೆಂದರೆ ಶಿವಶಕ್ತಿಯರು ಅಭೇದ."

ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರನ್ನು ತಮ್ಮ ಸ್ವಂತ ತಂದೆತಾಯಿಯೆಂದೂ, ಅವತಾರ ಪುರುಷರೆಂದೂ ಅಭೇದಾನಂದಜಿ ಭಾವಿಸುತ್ತಿದ್ದರು. ಈ ವಿಚಾರವಾಗಿ ಮಾತನಾಡುತ್ತ ಅವರು ಹೇಳುತ್ತಾರೆ: "ಶ್ರೀಮಾತೆಯವರ ವಾರ್ಧಕ್ಯದ ಕೆಲವು ಭಾವಚಿತ್ರಗಳಿವೆ. ನಾನೇನು ಹೇಳಬಯಸುವೆನೆಂದರೆ ಅವನ್ನೆಲ್ಲ ಮುದ್ರಿಸದಿರುವುದೇ ಲೇಸು. ಅವತಾರ ಪುರುಷರ ಮುಪ್ಪು ನೋಡಬಾರದು. ಅವರು ಪರಿಪೂರ್ಣರು. ಫ್ರಾಂಕ್ ಡೊರಾಕ್ ಯಾವ ರೀತಿಯ ತೈಲಚಿತ್ರವನ್ನು ತಯಾರು ಮಾಡಿದ್ದಾನೆ! ಶ್ರೀಮಾತೆಯವರ ಚಿತ್ರ ಅದರಲ್ಲಿ ತುಂಬಾ ಚೆನ್ನಾಗಿದೆ ಹಾಗೂ ಸುಂದರವಾಗಿದೆ. ಆ ರೀತಿ ಈ ದೇಶದಲ್ಲಿ ಬರೆಯಲು ಸಾಧ್ಯವೇ? ನಿಜವಾಗಿಯೂ ಷೋಡಶೀ ಮೂರ್ತಿ! ಜ್ಯೋತಿರ್ಮಯಿಯಾಗಿ ಕುಳಿತಿದ್ದಾರೆ. ಶ್ರೀಮಾತೆಯವರು ನಮ್ಮನ್ನೆಲ್ಲ ತಮ್ಮ ಮಕ್ಕಳಂತೆಯೇ ಕಾಣುತ್ತಿದ್ದರು. ನನ್ನ ಗುರುಭಾಯಿಗಳು ಒಬ್ಬೊಬ್ಬರಾಗಿ ಶರೀರತ್ಯಾಗ ಮಾಡಿದಾಗಲೂ ಶ್ರೀಮಾತೆಯವರು ತಾಯಿಯಂತೆ ಅತ್ತು ಅತ್ತು ಸುಸ್ತಾಗಿದ್ದಾರೆ. ಶ್ರೀಮಾತೆಯವರು ಅನೇಕ ದುಃಖಗಳನ್ನು ಅನುಭವಿಸಬೇಕಾಯಿತು." ಶ್ರೀಮಾತೆಯವರ ಜನ್ಮದಿನದಂದು ಒಮ್ಮೆ ಅಭೇದಾನಂದಜಿ ಹೀಗೆ ಹೇಳಿದರು, "ಜ್ಞಾನರೂಪಿಣಿ ಸರಸ್ವತಿ ಈಗ ಪೃಥ್ವಿಗೆ ಬಂದಿದ್ದಾಳೆ. ಶ್ರೀಮಾತೆಯವರೇ ಸರಸ್ವತಿ, ಜ್ಞಾನದಾಯಿನಿ, ಮುಕ್ತಿದಾಯಿನಿ, ಮಹಾಮಾಯಾ!" ಎಂದು.

**ಸ್ವಾಮಿ ರಾಮಕೃಷ್ಣಾನಂದರು**: ಶ್ರೀರಾಮಕೃಷ್ಣರ ಮೇಲಿನ ಇವರ ಭಕ್ತಿ ಸರ್ವವಿದಿತ. ಶ್ರೀರಾಮಕೃಷ್ಣರ ಸೇವೆಗಾಗಿ ಇವರು ತಮ್ಮ ಜೀವನವನ್ನೂ ಕಡೆಗಣಿಸಿದರು. ಅಂತಹ ಅನುರೂಪವಾದ ಭಕ್ತಿಯೇ ಶ್ರೀಮಾತೆಯವರ ಮೇಲೂ ಇತ್ತು. ಶ್ರೀಮಾತೆಯವರು ದಕ್ಷಿಣಭಾರತದ ತೀರ್ಥಯಾತ್ರೆಗೆ ಬಂದಾಗ ಅವರ ಎಲ್ಲ ಬೇಕುಬೇಡಗಳನ್ನು ಪೂರೈಸುವ ಭಾರ ರಾಮಕೃಷ್ಣಾನಂದರದಾಗಿತ್ತು. ಶ್ರೀಮಾತೆಯವರೂ ಸಹ ರಾಮನಾಡಿನ ರಾಜನಿಗೆ ಹೇಳಿದ್ದರು: 'ನಮಗೆ ಇನ್ನು ಯಾವುದರ ಆವಶ್ಯಕತೆಯೂ ಇಲ್ಲ. ಎಲ್ಲ ಅನುಕೂಲಗಳನ್ನೂ ಶಶಿ ಮಾಡಿಕೊಟ್ಟಿದ್ದಾನೆ" ಎಂದು. ಶ್ರೀಮಾತೆಯವರು ಪುರಿಯಿಂದ ಮದ್ರಾಸಿಗೆ ಬಂದಾಗ ಬೇಸಗೆ ಕಾಲ. ಅವರನ್ನು ಕರೆತರಲು ರಾಮಕೃಷ್ಣಾನಂದಜಿ ಮೋಟಾರು ಗಾಡಿಯನ್ನು ಮಾಡಿಕೊಂಡು ಬಂದಿದ್ದರು. ಅದರ ಸೀಟೆಲ್ಲಾ ಸುಡುತ್ತಿದ್ದ ಕಾರಣ, ಅದನ್ನು ತಣ್ಣಗಿರುವಂತೆ ಮಾಡಲು ತಮ್ಮ ಮೇಲುಹೊದಿಕೆಯನ್ನು ನೀರಿನಲ್ಲಿ ಅದ್ದಿ ಅದರ ಮೇಲೆ ಹಾಸಿದರು. ಅವರು ಶ್ರೀಮಾತೆಯವರಲ್ಲಿ ಶ್ರೀರಾಮಕೃಷ್ಣರನ್ನೇ ಕಾಣುತ್ತಿದ್ದರು. ಅಗ್ನಿ ಹಾಗೂ ಅದರ ಸುಡುವ ಶಕ್ತಿ ಹೇಗೆ ಬೇರೆ ಬೇರೆಯಲ್ಲವೋ ಅಂತೆಯೇ ಶ್ರೀರಾಮಕೃಷ್ಣ ಹಾಗೂ ಶ್ರೀಶಾರದಾಮಾತೆಯವರು ಒಂದೇ ಎಂದು ರಾಮಕೃಷ್ಣಾನಂದಜಿ ಅರಿತಿದ್ದರು. ಶ್ರೀಮಾತೆಯವರ ದರ್ಶನದಿಂದಲೇ ರಾಮಕೃಷ್ಣಾನಂದಜಿ ಭಾವುಕರಾಗಿಬಿಡುತ್ತಿದ್ದರು. ಅವರಿಗೆ ಸೇವೆ ಸಲ್ಲಿಸುವ ಭಾಗ್ಯ ತಮಗೆ ಪ್ರಾಪ್ತವಾಯಿತೆಂದು ಅವರಿಗೆ ಅತ್ಯಂತ ಆನಂದ; ತಮ್ಮ ಆಹಾರ, ನಿದ್ರೆಗಳನ್ನು ಸಹ ಲೆಕ್ಕಿಸದೆ ಶ್ರೀಮಾತೆಯವರ ಸೇವೆಯನ್ನು ಮಾಡಿದರು. ಶ್ರೀಮಾತೆಯವರು ದಕ್ಷಿಣಕ್ಕೆ ಬಂದದ್ದರಿಂದ ಅನೇಕ ಭಕ್ತಜನರ ಶ್ರೇಯಸ್ಸಾಗುವುದೆಂದು ನಂಬಿದ್ದರು.

ಶ್ರೀಮಾತೆಯವರು ಬೆಂಗಳೂರಿನ ಆಶ್ರಮಕ್ಕೆ ಆಗಮಿಸಿ, ಆ ಆಶ್ರಮದ ಹಿಂಬದಿಯಲ್ಲಿರುವ ಸಣ್ಣ ಬೆಟ್ಟದ ಮೇಲೆ ಧ್ಯಾನಕ್ಕೆ ಕುಳಿತಾಗ ರಾಮಕೃಷ್ಣಾನಂದಜಿ ಆನಂದದಿಂದ "ಆಹಾ! ನಮ್ಮ ತಾಯಿ ಇಂದು ಪರ್ವತವಾಸಿನಿಯಾಗಿದ್ದಾರೆಯೋ?" ಎನ್ನುತ್ತ ಕಷ್ಟಪಟ್ಟು ಆ ಬೆಟ್ಟ ಹತ್ತಿ ಶ್ರೀಮಾತೆಯವರ ಚರಣಕಮಲಗಳಲ್ಲಿ ತಮ್ಮ ಮಸ್ತಕವನ್ನಿಟ್ಟು ಶ್ರೀದುರ್ಗಾಸಪ್ತಶತಿಯ **ಸರ್ವಮಂಗಲ ಮಾಂಗಲ್ಯೇ ಶಿವೇ**

**ಸರ್ವಾರ್ಥಸಾಧಿಕೇ । ಶರಣ್ಯೇ ತ್ರ್ಯಂಬಕೇ ಗೌರೀ ನಾರಾಯಣಿ ನಮೋಸ್ತುತೇ ॥** ಎಂದು ಹೇಳಿ ಸ್ತುತಿಸಿದರು. ಶ್ರೀಮಾತೆ ಸಹ ರಾಮಕೃಷ್ಣಾನಂದರನ್ನು ತುಂಬುಹೃದಯದಿಂದ ಆಶೀರ್ವದಿಸಿದರು. ಶ್ರೀಮಾತೆಯವರ ಬರುವಿಕೆಯಿಂದ ರಾಮಕೃಷ್ಣ ವಿವೇಕಾನಂದ ಆಂದೋಲನವು ದಕ್ಷಿಣದಲ್ಲಿ ಇನ್ನೂ ಶಕ್ತಿಶಾಲಿಯಾಗುವುದೆಂದು ರಾಮಕೃಷ್ಣಾನಂದರು ಪೂರ್ಣವಾಗಿ ನಂಬಿದ್ದರು.

ಶ್ರೀಮಾತೆಯವರನ್ನು ದಕ್ಷಿಣಕ್ಕೆ ಕರೆತಂದುದೇ ತಮ್ಮ ಜೀವಿತದ ಕೊನೆಯ ಕೆಲಸವೆಂದು ರಾಮಕೃಷ್ಣಾನಂದಜಿ ಭಾವಿಸಿದ್ದರು. ಇದಾದ ಮೇಲೆ ಭೀಕರ ಕ್ಷಯರೋಗದಿಂದ ನರಳಿ ಕಡೆಗಾಲದಲ್ಲಿ ಶ್ರೀಮಾತೆಯವರ ದಿವ್ಯದರ್ಶನ ಪಡೆದು ಶ್ರೀರಾಮಕೃಷ್ಣರ ಚರಣದಲ್ಲಿ ಲೀನರಾದರು.

**ಸ್ವಾಮಿ ಅದ್ವೈತಾನಂದರು :** ಸ್ವಾಮಿ ಅದ್ವೈತಾನಂದಜಿ ತಮ್ಮ ಗುರುಗಳಾದ ಶ್ರೀರಾಮಕೃಷ್ಣರಿಗಿಂತಲೂ ವಯಸ್ಸಿನಲ್ಲಿ ದೊಡ್ಡವರು. ಆದ್ದರಿಂದ ಇವರನ್ನು ಹಿರಿಯ ಗೋಪಾಲ ಎಂದೇ ಎಲ್ಲರೂ ಕರೆಯುತ್ತಿದ್ದರು. ತಮ್ಮ ಇತರ ಗುರುಭಾಯಿಗಳಂತೆ ಅದ್ವೈತಾನಂದರೂ ಶ್ರೀಮಾತೆಯವರನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಕಾಣುತ್ತಿದ್ದರು. ದಕ್ಷಿಣೇಶ್ವರದಲ್ಲಿದ್ದಾಗ ಶ್ರೀರಾಮಕೃಷ್ಣರ ಆಣತಿಯಂತೆ ಅವರು ಶ್ರೀಮಾತೆಗಾಗಿ ಅಡುಗೆ ಪದಾರ್ಥಗಳನ್ನು ತರಲು ಬಜಾರಿಗೆ ಹೋಗುತ್ತಿದ್ದರು. ಆದ್ದರಿಂದ ಮೊದಲಿನಿಂದಲೂ ಮಾತೃಸಾನ್ನಿಧ್ಯ ಹಾಗೂ ಅವರ ಸೇವೆ ಮಾಡುವ ಸದವಕಾಶ ಅವರದಾಗಿತ್ತು. ಶಾಂತ, ಸಮಾಧಾನ ಚಿತ್ತದಿಂದ ಮೌನವಾಗಿ ಸೇವೆಯನ್ನು ಶ್ರೀಮಾತೆಯವರಿಗೆ ಸಲ್ಲಿಸುತ್ತಿದ್ದರು. ಇದೇ ಅವರ ಪೂಜೆಯೂ ಸಹ ಆಗಿತ್ತು.

ಬೇಲೂರುಮಠದಲ್ಲಿ ತರಕಾರಿ ಬೆಳೆಯುವ ಕೆಲಸ ಅದ್ವೈತಾನಂದರದಾಗಿತ್ತು. ಏನೇ ಬೆಳೆದರೂ ಅದರಲ್ಲಿ ಸ್ವಲ್ಪ ಭಾಗವನ್ನು ಶ್ರೀಮಾತೆಯವರಿಗೂ ಕಳುಹಿಸಿಕೊಡುತ್ತಿದ್ದರು. ಶ್ರೀಮಾತೆಯವರೂ ಸಹ ಈ ವೃದ್ಧ ಸನ್ಯಾಸಿಗಳೊಂದಿಗೆ ನಿಸ್ಸಂಕೋಚವಾಗಿ ಮಾತನಾಡುತ್ತಿದ್ದರು. ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆಯವರಲ್ಲಿ ಅಚಲವಾದ ಭಕ್ತಿಯಿಟ್ಟು ಅದರ ಜೊತೆಗೆ ಅವರ ಭಕ್ತರ ಸೇವೆ ಮಾಡುವುದೇ ಅದ್ವೈತಾನಂದರ ಜೀವನದ ಆದರ್ಶವಾಗಿತ್ತು. ಅವರು ಶ್ರೀಮಾತೆಯವರ ಸ್ವರೂಪದ ಬಗ್ಗೆ ಇತರ ಭಕ್ತರಿಗೆ ಹೇಳಿರುವ ವಿಚಾರಗಳು ತಿಳಿದುಬಂದಿಲ್ಲ. ಆದರೆ ಮಾತೃಸೇವಾಪರಾಯಣರಾದ ಈ ನಿರಭಿಮಾನಿ ಸನ್ಯಾಸಿಗಳು ತಮ್ಮ ನಿಷ್ಠೆಯ ಸೇವೆ ಹಾಗೂ ಭಕ್ತಿಯಿಂದಲೇ ಶ್ರೀಮಾತೆಯವರನ್ನು ಹೇಗೆ ತಿಳಿಯಬಹುದೆಂಬುದನ್ನು ಇತರರಿಗೆ ತೋರಿಸಿಕೊಟ್ಟಿದ್ದಾರೆ.

**ಸ್ವಾಮಿ ತುರೀಯಾನಂದರು :** ಪರಮ ವೇದಾಂತಿಗಳೂ, ಬ್ರಹ್ಮಜ್ಞಾನ ಪುರುಷರೂ ಆದ ತುರೀಯಾನಂದರು ಯಾವಾಗ ಅಮೆರಿಕಕ್ಕೆ ಹೊರಟರೋ ಆಗ ಕೇವಲ 'ಮಾ' 'ಮಾ' ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ಶ್ರೀಮಾತೆಯವರ ಕೃಪೆಯಿಲ್ಲದೆ ಜ್ಞಾನಪ್ರಾಪ್ತಿಯಾಗದು ಎಂದು ಅವರು ತಮ್ಮ ಇತರ ಗುರುಭಾಯಿಗಳಂತೆ ದೃಢವಾಗಿ ನಂಬಿದ್ದರು. ಇದರ ಬಗ್ಗೆ ಮಾತನಾಡುತ್ತ ಅವರು ಹೇಳುತ್ತಾರೆ: "ಶ್ರೀಮಾತೆಯವರ ಶಿಶುವಾಗು. ಅವರು ತಮ್ಮ ಮಕ್ಕಳಿಗೆ ಸಹಾಯ ಮಾಡಲು ಸದಾ ಪ್ರಸ್ತುತ. ಮಾತೆಯವರ ಬಳಿ ಪ್ರಾರ್ಥನೆ ಮಾಡು, ಎಲ್ಲವೂ ಸರಿಹೋಗುತ್ತದೆ." ಮುಂದುವರಿದು ಹೇಳುತ್ತಾರೆ, "ನಮಗೆ ತಿಳಿದಿರಲಿ ಅಥವಾ ತಿಳಿಯದೇ ಇರಲಿ, ಶ್ರೀಮಾತೆಯವರೊಬ್ಬರೇ ನಮ್ಮ ಏಕಮಾತ್ರ ಆಸರೆ. ಶ್ರೀಮಾತೆಯವರು ವಿಶ್ವಜನನಿ."

ಶ್ರೀಮಾತೆಯವರು ದುರ್ಗಾಪೂಜೆಯ ಸಮಯದಲ್ಲಿ ಬೇಲೂರುಮಠದಲ್ಲಿ ಇದ್ದರೆಂದು ತಿಳಿದು ತುರೀಯಾನಂದರು ಪ್ರೇಮಾನಂದರಿಗೆ ಪತ್ರ ಬರೆದು ತಿಳಿಸಿದರು: "ಶ್ರೀಮಾತೆಯವರ ಸಾನ್ನಿಧ್ಯದಿಂದ ಎಲ್ಲವೂ ಸುಸಂಪನ್ನವಾಗಿ ನೆರವೇರಿತೆಂದು ನಂಬಿರುತ್ತೇನೆ; ಹಾಗೂ ಭಕ್ತರ ಹೃದಯದಲ್ಲಿ ಆನಂದದ ಸ್ರೋತವೇ ಹರಿಯುತ್ತಿದೆ ಎಂದು ತಿಳಿದಿರುವೆ. ಅವರ ಚರಣಕಮಲಕ್ಕೆ ನನ್ನ ಅಸಂಖ್ಯ ಪ್ರಣಾಮಗಳನ್ನು ತಿಳಿಸು."

ಇನ್ನೊಂದು ಪತ್ರದಲ್ಲಿ ಭಕ್ತನೊಬ್ಬನಿಗೆ ಬರೆಯುತ್ತ "ಶ್ರೀಮಾತೆಯವರು ಶೀಘ್ರದಲ್ಲೇ ಕಲ್ಕತ್ತೆಗೆ ಬರುತ್ತಿದ್ದಾರೆ. ಇದೊಂದು ಮಹಾ ಆನಂದದ ಸುದ್ದಿ. ಎಷ್ಟೊಂದು ಜನ ಅವರ ಆಶ್ರಯ ಪಡೆದು ಕೃತಾರ್ಥರಾಗುತ್ತಾರೆ! ಅದಕ್ಕೆ ಲೆಕ್ಕವೇ ಇಲ್ಲ. ಧನ್ಯ, ಶ್ರೀಮಾತೆಯವರ ಕೃಪೆ! ಅವರಿಗೆ ಎಷ್ಟೊಂದು ಸಹನೆ! ಬೇಸರದ ಭಾವ ಅವರಲ್ಲಿ ಇಲ್ಲವೇ ಇಲ್ಲ. ಹಗಲೂ ರಾತ್ರಿ ನಿರಂತರವಾಗಿ ಜನ ಬರುತ್ತಿರುತ್ತಾರೆ. ಶ್ರೀಮಾತೆಯವರು ಕಾತರರಾಗಿ ಅವರೆಲ್ಲರಿಗೂ ಮಂಗಳ ಉಂಟುಮಾಡುತ್ತಿರುತ್ತಾರೆ" ಎಂಬ ಶ್ರದ್ಧೆಯನ್ನು ವ್ಯಕ್ತಪಡಿಸಿದ್ದಾರೆ.

ಶ್ರೀಮಾತೆಯವರ ಕೃಪೆ ಅತ್ಯಂತ ಅಮೋಘವಾದದ್ದು. ಅದರಿಂದ ಎಲ್ಲ ಸಂಶಯಗಳೂ ನಿವಾರಣೆಯಾಗುವುದೆಂದು ತಿಳಿಸುತ್ತ ಮತ್ತೊಂದು ಪತ್ರದಲ್ಲಿ ಈ ರೀತಿ ಹೇಳುತ್ತಾರೆ: "ಶ್ರೀಮಾತೆಯವರ ಕೃಪಾಲಾಭವನ್ನು ಹೊಂದಿದ್ದೀಯ, ಮತ್ತೇತರ ಭಯ? ಈಗ ಭಗವಂತನಲ್ಲಿ ಆತ್ಮಸಮರ್ಪಣೆ ಮಾಡಿಕೊಂಡು ಆನಂದದಿಂದ ಇರು."

ಶ್ರೀಮಾತೆಯವರ ಸ್ವರೂಪದ ಬಗ್ಗೆ ಸ್ವಲ್ಪ ತಿಳಿವನ್ನು ನಮಗೆ ನೀಡುತ್ತ ತುರೀಯಾನಂದಜಿ ಬರೆಯುತ್ತಾರೆ, "ಅಹಾ! ಎಂತಹ

ಮಹಾಶಕ್ತಿ ಜಗತ್ತಿನ ಕಲ್ಯಾಣಕ್ಕಾಗಿ ಅವತರಿಸಿದೆ! ಮನಸ್ಸನ್ನು ಕಂಠಪ್ರದೇಶಕ್ಕೆ ತರಲು ನಾವು ಎಷ್ಟೊಂದು ಕಷ್ಟಪಡುತ್ತಿದ್ದೇವೆ. ಅದೇ ಮನಸ್ಸನ್ನು ಅವರು ರಾಧು ರಾಧು ಎಂದು ಹೇಳುತ್ತ ಬಲವಂತವಾಗಿ ಕೆಳಗೆ ಇಳಿಸುತ್ತಿದ್ದಾರೆ. ಇದೆಂತಹ ಪರಿ ಎಂದು ತಿಳಿ! ಜೈ ಮಹಾಶಕ್ತಿ. ಜೈ ಮಾ."

**ಸ್ವಾಮಿ ನಿರಂಜನಾನಂದರು**: ಸ್ವಾಮಿ ವಿವೇಕಾನಂದರು ಸ್ವಾಮಿ ಶಿವಾನಂದರಿಗೆ ಒಂದು ಪತ್ರವನ್ನು ಬರೆದು, ಅದರಲ್ಲಿ ಸ್ವಾಮಿ ನಿರಂಜನಾನಂದಜಿ ಶ್ರೀಮಾತೆಯವರಲ್ಲಿ ಅತ್ಯಂತ ಭಕ್ತಿಯನ್ನು ಇಟ್ಟಿರುವುದರಿಂದ ಅವರ ಎಲ್ಲ ತಪ್ಪಿಗೂ ಕ್ಷಮೆ ಇದೆ ಎನ್ನುತ್ತಾರೆ. ಗಿರೀಶಚಂದ್ರ ಘೋಷ್‌ರಿಗೆ ಶ್ರೀರಾಮಕೃಷ್ಣರಲ್ಲಿ ಪೂರ್ಣ ಭಕ್ತಿಯಿತ್ತು. ಆದರೆ ಶ್ರೀಮಾತೆಯವರನ್ನು ಕೇವಲ ಗುರುಪತ್ನಿ ಎಂದು ಗೌರವಿಸುತ್ತಿದ್ದರು. ಅವರಿಗೆ ಶ್ರೀಮಾತೆಯವರು ಸಾಕ್ಷಾತ್ ಜಗಜ್ಜನನಿ, ಮಹಾಮಾಯಾ ಎಂಬ ಅರಿವು ಉಂಟುಮಾಡಿದ್ದು ಸ್ವಾಮಿ ನಿರಂಜನಾನಂದಜಿ. ಆಗಿನ ಕಾಲದಲ್ಲಿ ಶ್ರೀಮಾತೆಯವರ ದಿವ್ಯಸ್ವರೂಪದ ಬಗ್ಗೆ ಯಾರೂ ಮಾತನಾಡುತ್ತಿರಲಿಲ್ಲ. ಅವರೂ ಸಹ ಲೋಕದ ಕಣ್ಣಿಗೆ ದೂರವಾಗಿಯೇ ಇದ್ದರು. ಅಂತಹ ಸಮಯದಲ್ಲೂ ಮಾತೃ ಭಕ್ತರಾದ ನಿರಂಜನಾನಂದಜಿ, ಮಾತೆಯ ಮಹಿಮೆಯನ್ನು ಎಲ್ಲರ ಮುಂದೆಯೂ ನಿಸ್ಸಂಕೋಚವಾಗಿ, ನಿರ್ಭಯವಾಗಿ ಹೇಳುತ್ತಿದ್ದರು. ಅವರು ತಮ್ಮ ಅನುಭೂತಿ ಹಾಗೂ ವಿಚಾರಗಳಿಂದ ಶ್ರೀಮಾತೆಯವರ ದಿವ್ಯಸ್ವರೂಪವನ್ನು ಭಕ್ತರ ಹೃದಯದಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ಅನೇಕರನ್ನು ಶ್ರೀಮಾತೆಯವರ ಚರಣಕ್ಕೆ ತಂದವರು ನಿರಂಜನಾನಂದಜಿ. ಸ್ವಾಮಿ ನಿರಂಜನಾನಂದಜಿ ಅವರನ್ನು ಪ್ರೋತ್ಸಾಹಿಸಿ ಜಯರಾಮಬಾಟಿಗೆ ಕಳುಹಿಸಿದವರೂ ಇವರೇ. ಇವರದು ವೀರಭಾವ. ಶ್ರೀರಾಮಕೃಷ್ಣ, ವಿವೇಕಾನಂದರ ದ್ವಾರಪಾಲಕರಾದಂತೆ ನಿರಂಜನಾನಂದರು ಶ್ರೀಮಾತೆಯವರ ದ್ವಾರಪಾಲಕರೂ ಆಗಿದ್ದರು.

ಕಾಮಾರಪುಕುರದಲ್ಲಿ ಉನ್ಮತ್ತ ಹರೀಶನು ಗಲಾಟೆ ಮಾಡಿದ್ದನ್ನು ಕೇಳಿ ಶಾರದಾನಂದಜಿಯವರೊಂದಿಗೆ ನಿರಂಜನಾನಂದರೂ ಅಲ್ಲಿಗೆ ಬಂದರು. "ಅವನನ್ನು ಇಲ್ಲಿಂದ ಕಳುಹಿಸು" ಎಂದು ಶ್ರೀಮಾತೆಯವರು ನಿರಂಜನಾನಂದರಿಗೆ ಹೇಳಿದರು. ಆಶ್ಚರ್ಯದ ವಿಷಯವೆಂದರೆ ನಿರಂಜನಾನಂದಜಿ ಅಲ್ಲಿಗೆ ಬರುತ್ತಲೇ ಹರೀಶ ಅಲ್ಲಿಂದ ಹೊರಟುಹೋದ.

ಅಲ್ಪಾಯುಗಳಾದ ನಿರಂಜನಾನಂದರು ಚಿರವಿಶ್ರಾಮಕ್ಕಾಗಿ ಹಿಮಾಲಯಕ್ಕೆ ಹೋಗುವ ಮುಂಚೆ ಒಂದು ಚಿಕ್ಕಮಗು ವಿನಂತಾದರು. ಎಲ್ಲಕ್ಕೂ ತಾಯಿಯನ್ನು ಅವಲಂಬಿಸಿರುವ ಅಸಹಾಯಕ ಶಿಶುವಿನಂತೆ ವರ್ತಿಸುತ್ತಿದ್ದರು. ಸದಾ ಮಾತೆಯವರ ಸ್ಮರಣೆಯಲ್ಲಿ ಇರುತ್ತಿದ್ದರು. ಕೊನೆಗೊಂದು ದಿನ ಕಂಬನಿ ತುಂಬಿದ ಕಣ್ಣುಗಳಿಂದ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, "ತಾಯಿ, ಸದಾ ತಮ್ಮ ಜೊತೆಯಲ್ಲಿಯೇ ಇರಬೇಕು" ಎಂದು ಮನಸ್ಸಿನಲ್ಲೇ ಪ್ರಾರ್ಥನೆ ಮಾಡಿದರು. ಅಂತಿಮ ದರ್ಶನ ಪಡೆಯುತ್ತಿದ್ದ ತಮ್ಮ ಪುತ್ರನಿಗೆ ಶ್ರೀಮಾತೆಯವರೂ ಕಂಬನಿ ತುಂಬಿದ ಕಣ್ಣುಗಳಿಂದಲೇ ಆಶೀರ್ವಾದ ಮಾಡಿದರು. ಜನನಿಯ ಆಶೀರ್ವಾದ ಹಾಗೂ ಅನುಮತಿಯನ್ನು ಪಡೆದು ಸ್ವಾಮಿ ನಿರಂಜನಾನಂದರು ಹರಿದ್ವಾರದ ಕಡೆಗೆ ಪ್ರಯಾಣ ಮಾಡಿದರು.

**ಸ್ವಾಮಿ ಸುಬೋಧಾನಂದರು**: ಸ್ವಾಮಿ ಸುಬೋಧಾನಂದರು ತಮ್ಮ ಅನೇಕ ಪತ್ರಗಳಲ್ಲಿ ಭಕ್ತರಿಗೆ ಶ್ರೀಮಾತೆಯವರ ನಿಜಸ್ವರೂಪದ ಬಗ್ಗೆ ಹಾಗೂ ಮಾತೆಯವರ ಮೇಲಿನ ನಮ್ಮ ಶ್ರದ್ಧಾಭಕ್ತಿಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಕಾಶಿಯಿಂದ ಒಬ್ಬ ಭಕ್ತನಿಗೆ ಈ ರೀತಿ ಬರೆಯುತ್ತಾರೆ: "ಇಲ್ಲಿನ ಪೂಜಾರಿಗಳು ಅನ್ನಕೂಟವನ್ನು ನಡೆಸುತ್ತಿದ್ದಾರೆ. ಆದರೆ ಯಾರು ಜಗತ್ತಿನ ಜನನಿಯಾಗಿದ್ದಾರೊ ಅವರ ಅನ್ನಕೂಟ ಎಷ್ಟು ದೊಡ್ಡದಿರಬೇಡ? ಸಮಸ್ತ ಜಗತ್ತಿನ ಜನಕ್ಕೆ ಹಾಗೂ ಜೀವಜಂತುಗಳಿಗೆ ಆಕೆ ಊಟ ಬಡಿಸಬೇಕಾಗಿದೆ! ಇದನ್ನೆಲ್ಲ ಚಿಂತಿಸುತ್ತಿದ್ದರೆ ಮನಸ್ಸು ದೇಹದಿಂದ ಹೊರಬಂದು ಎಲ್ಲೋ ಹೊರಟುಹೋಗುತ್ತದೆ! ಶ್ರೀರಾಮಕೃಷ್ಣರು ಆಗಾಗ ಹೇಳುತ್ತಿದ್ದರು: 'ಈ ಬಾರಿ ಸ್ವಯಂ ಜಗನ್ಮಾತೆ ನರರೂಪದಲ್ಲಿದ್ದು ಓಡಾಡಿಕೊಂಡು ಬರಲು ಬಂದಿದ್ದಾಳೆ. ಯಾವಾಗ ಎಲ್ಲಾ ಸಂಪ್ರದಾಯದ ಜನರೂ ಅವರ ಬಳಿ ಬರುತ್ತಾರೋ ಆಗ ಅವರು ಇಲ್ಲಿ ಹೆಚ್ಚು ಕಾಲ ಇರುವುದಿಲ್ಲ'." ಶ್ರೀಮಾತೆಯವರು ಸ್ವಯಂ ಮಹಾಮಾಯೆ ಎನ್ನುತ್ತಿದ್ದರು ಸುಬೋಧಾನಂದರು.

ಇನ್ನು ಕೆಲವು ಪತ್ರಗಳಲ್ಲಿ ಈ ರೀತಿ ಬರೆದಿದ್ದಾರೆ: "ಯಾವಾಗ ಶ್ರೀರಾಮಕೃಷ್ಣರ ಕೃಪೆಗೆ ಪಾತ್ರಳಾದೆಯೋ, ಶ್ರೀಮಾತೆಯವರ ದರ್ಶನ ಪಡೆದೆಯೋ ಇನ್ನು ಮುಕ್ತಿಯ ಬಗೆಗೆ ಏಕೆ ಯೋಚಿಸುವೆ?"; "ನಿನ್ನ ಪೂರ್ವಜನ್ಮದ ಮಹಾಪುಣ್ಯದಿಂದಾಗಿ ಶ್ರೀಮಾತೆಯ ದರ್ಶನ ಪಡೆದಿರುವೆ"; "ಆಕೆಯ ದಯೆಯಿಂದ ನಿನಗೆ ಸಮಸ್ತವೂ ಸಿದ್ಧಿಸುತ್ತದೆ. ಸೂರ್ಯನ ಬೆಳಕಿನಿಂದಲೇ ಸೂರ್ಯನನ್ನು ನೋಡಲು ಸಾಧ್ಯ. ಅವರ ಕೃಪೆಯಿಂದಲೇ ಅವರನ್ನು ತಿಳಿಯಲು ಸಾಧ್ಯ."

ಶ್ರೀಮಾತೆಯವರ ಮಾನುಷ ಲೀಲೆ ಮುಗಿದ ಮೇಲೆ ಒಬ್ಬರಿಗೆ ಪತ್ರ ಬರೆಯುತ್ತಾ ಅದರಲ್ಲಿ ಶ್ರೀಮಾತೆಯವರ ಅಲೌಕಿಕ ಪ್ರೇಮದ ವಿಷಯವನ್ನು ಒತ್ತಿ ಹೇಳುತ್ತಾರೆ: "ಶ್ರೀಮಾತೆಯವರು ಮೊದಲು ಮಾನುಷ ಶರೀರದಲ್ಲಿ ಇದ್ದರು. ಈಗ ಪ್ರತಿಯೊಬ್ಬ ಭಕ್ತರ ಹೃದಯದಲ್ಲೂ ವಿರಾಜ

ಮಾನರಾಗಿದ್ದಾರೆ. ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆಯವರನ್ನು ಕುರಿತು ಎಷ್ಟೆಷ್ಟು ಪರಿಭಾವಿಸುವೆವೊ ಅಷ್ಟಷ್ಟೂ ಅವರನ್ನು ತಿಳಿಯುತ್ತೇವೆ.. ಅವರೊಡನೆ ಆಡಿದ ಮಾತು, ಅವರ ಪ್ರೇಮ, ದಯೆ, ಇವನ್ನೆಲ್ಲ ಜೀವನದಲ್ಲಿ ಎಂದಾದರೂ ಮರೆಯಲಾಗುವುದೆ? ತಂದೆತಾಯಿಗಳೂ ಸಹ ಅಂತಹ ಪ್ರೀತಿಯನ್ನು ಕೊಡಲಾರರು."

ಶ್ರೀರಾಮಕೃಷ್ಣ, ಶ್ರೀಮಾತೆಯರು ಅಭೇದರೆಂಬುದೇ ಸುಬೋಧಾನಂದರ ವಿಶ್ವಾಸ. ಅವರು ಸದಾ ಇವರಿಬ್ಬರ ಪುಣ್ಯನಾಮ ಸ್ಮರಣೆಯನ್ನು ಒಟ್ಟಿಗೇ ಹೇಳುತ್ತಿದ್ದರು. ಓರ್ವ ಭಕ್ತೆಗೆ ಬರೆಯುತ್ತಾ, "ಯಾವಾಗ ಬೇರೆ ಕೆಲಸವಿರುವುದಿಲ್ಲವೊ ಶ್ರೀಮಾತೆಯವರ ಜೀವನವನ್ನು ಇತರರಿಗೆ ಓದಿ ಹೇಳು. ಇದರಿಂದ ಇಬ್ಬರಿಗೂ ಮಂಗಳ ಉಂಟಾಗುತ್ತದೆ, ಹಾಗೂ ಶಾಂತಿ ಉಂಟಾಗುತ್ತದೆ. ಶ್ರೀಮಾತೆಯವರು ಮಹಾಮಾಯಾ, ಆದ್ಯಾಶಕ್ತಿ. ಭಗವಂತ ನರದೇಹಧಾರಣೆ ಮಾಡಿ ಬಂದಾಗಲೆಲ್ಲ ಆದ್ಯಾಶಕ್ತಿಯೂ ಒಡನೆ ಬಂದಿದ್ದಾಳೆ. ಶ್ರೀರಾಮಚಂದ್ರನ ಜೊತೆ ಸೀತೆಯಾಗಿ, ಶ್ರೀಕೃಷ್ಣನೊಡನೆ ರಾಧೆಯಾಗಿ, ಬುದ್ಧದೇವನೊಡನೆ ಯಶೋಧರೆಯಾಗಿ, ಚೈತನ್ಯ ಮಹಾಪ್ರಭುವಿನೊಡನೆ ವಿಷ್ಣುಪ್ರಿಯೆಯಾಗಿ, ಈ ಬಾರಿ ಶ್ರೀರಾಮಕೃಷ್ಣರೊಡನೆ ಶ್ರೀಶಾರದಾಮಾತೆಯಾಗಿ."

## 'ಸಮಾಧಾನ' ಎಂದರೇನು?

ನಾವು ನಮ್ಮ ದಿನನಿತ್ಯದ ಬದುಕಿನಲ್ಲಿ 'ಸಮಾಧಾನ' ಎಂಬ ಪದವನ್ನು ಬಹಳಷ್ಟು ಬಳಸುತ್ತಿರುತ್ತೇವೆ. ಯಾರಾದರೂ ಮನೆಯಾಕೆಯನ್ನು "ಏನ್ರೀ, ಏನೋ ಒಂದು ತರಹ ಇದ್ದೀರಲ್ಲ. ಏಕೆ ಮೈಗೆ ಸರಿಯಿಲ್ಲವೇನು?" ಎಂದು ಕೇಳಿದರೆ, "ಏನೋ ಸಮಾಧಾನವೇ ಇಲ್ಲ ಕಣ್ರೀ" ಎಂದು ಉತ್ತರಿಸುತ್ತಾಳೆ ಮನೆಯಾಕೆ. ಯಾವುದಾದರೂ ಆಗಬೇಕಾದ ಕೆಲಸ-ಕಾರ್ಯವು ಅವರು ಅಂದುಕೊಂಡಂತೆ ನಡೆದುಬಿಟ್ಟರೆ, "ಅಬ್ಬ! ಈಗ ಸಮಾಧಾನವಾಯಿತು" ಎಂದು ನಿಟ್ಟುಸಿರು ಬಿಡುತ್ತಾರೆ. "ಅಲ್ಲ, ಅವರು ಮಗಳಿಗೆ ಗಂಡು ನೋಡಿದ್ದರಂತಲ್ಲ, ಏನಾಯಿತಂತೆ?" ಎಂದು ಹೆಂಡತಿ ಗಂಡನನ್ನು ಕೇಳಿದಾಗ, "ಅವರಿಗೆ ಸಮಾಧಾನವಾಗಲಿಲ್ಲವಂತೆ ಕಣೇ. ಅದಕ್ಕೆ ಹುಡುಗ ಒಪ್ಪಿಗೆ ಆಗಲಿಲ್ಲ ಎಂದರಂತೆ," ಎಂದು ಗಂಡ ಉತ್ತರಿಸುತ್ತಾನೆ.

"ಏನ್ರಮ್ಮ, ನಿಮ್ಮ ಮಗ ಪರೀಕ್ಷೆಯಲ್ಲಿ ಬರೆದಿದ್ದನಲ್ಲ, ಏನಾಯಿತು?" ಎಂದು ಪಕ್ಕದ ಮನೆಯವರ ಮಗನ ಫಲಿತಾಂಶದ ಕುರಿತು ಕೇಳಿದರೆ, "ಇಲ್ರೀ, ಬಹಳ ಕಡಿಮೆ ಅಂಕ ಕೊಟ್ಟಿದ್ದಾರೆ. ಅವನಿಗೆ 'ಸಮಾಧಾನ'ವೇ ಇಲ್ರೀ. ತುಂಬಾ ಮಂಕಾಗಿಬಿಟ್ಟಿದ್ದಾನ್ರಿ" ಎಂದು ಉತ್ತರಿಸುತ್ತಾರೆ. ಮನೆಯಲ್ಲಿ ತಾಯಿ ಮಗಳಿಗೆ ಸೀರೆ ಕೊಡಿಸಿದಾಗ ಮಗಳು ಅದನ್ನು ಒಪ್ಪುವುದಿಲ್ಲ. "ನೀನು ಯಾವಾಗಲೂ ಹೀಗೆ. ಏನು ತಂದು ಕೊಟ್ಟರೂ, ಏನಾದರೂ ಒಂದು ಕೊಂಕು ಮಾತಾಡುತ್ತೀಯ! ನಿನಗೆ ಸಮಾಧಾನವೆನ್ನುವುದೇ ಇಲ್ಲ" ಎಂದು ತಾಯಿ ಮಗಳನ್ನು ಬಯ್ಯುತ್ತಾಳೆ.

ಹೀಗೆ ಸಮಾಧಾನ ಎಂಬ ಪದ ಎಲ್ಲರ ಮನೆಗಳಲ್ಲಿಯೂ ನಿತ್ಯವೂ ಬಳಕೆಯಾಗುತ್ತದೆ. ಆದರೆ ಈ ಪದದ ಅರ್ಥ ಮಾತ್ರ ಬಹುತೇಕ ಮಂದಿಗೆ ತಿಳಿದಿಲ್ಲ. ಇದು ಸಂಸ್ಕೃತ ಪದ. ಈ ಪದವನ್ನು ಬಿಡಿಸಿದರೆ **ಸಮ್** ಮತ್ತು **ಆ** ಎಂಬ ಉಪಸರ್ಗಗಳಿಂದ ಕೂಡಿದ **ಧಾ** ಧಾತು ಮತ್ತು ಲ್ಯುಟ್ ಪ್ರತ್ಯಯಗಳು ದೊರೆಯುತ್ತವೆ. ಸರಿಯಾಗಿ, ಸಮರ್ಪಕವಾಗಿ ಎಂಬುದು **ಸಮ್** ಉಪಸರ್ಗದ ಅರ್ಥ. ಎಲ್ಲೆಡೆಯಿಂದ ಎಂಬುದು **ಆ** ಉಪಸರ್ಗದ ಅರ್ಥ. **ಧಾ** ಧಾತುವಿಗೆ ಹಿಡಿಯುವುದು, ಧರಿಸುವುದು, ಪೋಷಿಸುವುದು, ಒಂದುಗೂಡಿಸುವುದು ಎಂಬ ಅರ್ಥಗಳಿವೆ. ಸಮಾಧಾನ ಎಂಬ ಪದಕ್ಕೆ ಚದುರಿಹೋಗಿರುವ ಮನಸ್ಸನ್ನು ಸ್ಥಿರಗೊಳಿಸುವುದು, ಒಂದುಗೂಡಿಸುವುದು ಎಂದು ಅರ್ಥವಾಗುತ್ತದೆ. ಮನಸ್ಸು ತಿಳಿಯಾದಾಗ ಶಾಂತಿಯ ಅನುಭವವಾಗುತ್ತದೆ, ಬುದ್ಧಿಯು ಸ್ಪಷ್ಟವಾಗಿ ಆಲೋಚಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಅಂತಹ ಮನಸ್ಸು ಉದ್ವೇಗಗಳ ಹೊಯ್ದಾಟದಲ್ಲಿ ಹಳಿ ತಪ್ಪುವುದಿಲ್ಲ. ಇದನ್ನು ಪ್ರಯತ್ನಪೂರ್ವಕವಾಗಿ ಸಾಧಿಸಬೇಕು.

ಮತ್ತೊಂದು ದೃಷ್ಟಿಯಿಂದ ಸಮಾಧಾನವೆಂದರೆ ಆತ್ಮದಲ್ಲಿ ಮನಸ್ಸನ್ನು ಇಡುವುದು ಎಂದು ಅರ್ಥ. ಎಲ್ಲ ಕ್ರಿಯೆಗಳಿಗೂ ಆಧಾರವಾಗಿರುವ ಚೈತನ್ಯದಲ್ಲಿ, ಆತ್ಮಚಿಂತನೆಯಲ್ಲಿ ಮನಸ್ಸನ್ನು ತೊಡಗಿಸಬೇಕು. ಆತ್ಮಸಮರ್ಪಣ ಭಾವದಲ್ಲಿ ಕರ್ತವ್ಯಗಳನ್ನು ಶ್ರದ್ಧೆಯಿಂದ, ತಾಳ್ಮೆಯಿಂದ ನಿರ್ವಹಿಸಬೇಕು. ಕೇವಲ ಇಂದ್ರಿಯಗಳನ್ನು ತೃಪ್ತಿಪಡಿಸುವುದರಿಂದ, ಮನಸ್ಸಿಗೆ ಬೇಕಾದುದನ್ನು ಒದಗಿಸುವುದರಿಂದ ಸಮಾಧಾನವು ದೊರೆಯುತ್ತದೆ ಎಂದು ಹಲವರು ಭಾವಿಸುತ್ತಾರೆ. ಸಮಾಧಾನವನ್ನು ವಸ್ತುಗಳಿಂದ, ವ್ಯಕ್ತಿಗಳಿಂದ ಪಡೆಯಲಾದೀತೆ?

ಸಮಾಧಾನವೆಂದರೆ ಆತ್ಮತೃಪ್ತಿ ಎಂದರ್ಥ. ಪ್ರತಿ ಜೀವಿಯ ಬದುಕಿನ ಎರಡೂ ಮುಖಗಳೂ (ಎಂದರೆ ಬಾಹ್ಯದ ಬದುಕು ಮತ್ತು ಅಂತರಂಗದ ಬದುಕು) ಪರಿಪೂರ್ಣವಾಗಬೇಕು. ಆಗಲೇ ಮಾನವ ಬಯಸುವ ಸಮಾಧಾನ-ಶಾಂತಿ-ನೆಮ್ಮದಿ, ಸುಖ-ಸಂತೃಪ್ತಿ ದೊರೆಯುವುವು. ನಾವು ಸಮಾಧಾನಿಗಳಾಗಬೇಕಾದರೆ ಅಂತರಂಗದಲ್ಲಿ ಮನಸ್ಸು ಸಮರಸವಾಗಿ ಬೆರೆಯಬೇಕು; ಚೈತನ್ಯದ ಬೆಳಕಿನಿಂದ ಪರಿಶುದ್ಧವಾಗಿ ಹೊರಗಿನ ಚಟುವಟಿಕೆಗಳಲ್ಲಿ ತೊಡಗಬೇಕು. ಇದು ಇದರ ಮೂಲ ಅರ್ಥ.

**–ಸ್ವಾಮಿ ಹರಿಹರಾನಂದ ಸರಸ್ವತೀ, ಪರಿವ್ರಾಜಕರು, ಶಿಕಾರಿಪುರ**